# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಜಾಣ ಪರೀಕ್ಷೆ – ೨೦೨೨

**ಪ್ರಶ್ನೆಪತ್ರಿಕೆ – ೧**

## ನಡುಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**೧. ಕೆಳಗಿನವುಗಳಲ್ಲಿ ಹತ್ತು ಪದಗಳಿಗೆ ಅರ್ಥ ಬರೆಯಿರಿ. ೧೦x೧=೧೦**

೧) ಪಾವುಗೆ ೨) ಹೇದಯ ೩) ಉಂಗುಟ ೪) ನೀರವ

೫) ಭಾಳಾಕ್ಷ ೬) ಕರಕಿ ೭) ದುರಿತ ೮) ಎಲು

೯) ಮಿಟ್ಟೆ ೧೦) ಕರ್ತಾರ ೧೧) ಓಗರ ೧೨) ಆವಿಗೆ

೧೩) ತಟಾಕ ೧೪) ಕಿಚ್ಚು ೧೫) ಅಸು

**೨. ಈ ಪದ್ಯದ ಅರ್ಥ–ಭಾವಗಳನ್ನು ವಿವರಿಸಿ ೧x೧೦=೧೦**

ಅ) ಕಲ್ಲನಾಗರ ಕಂಡಡೆ ಹಾಲನೆರೆಯೆಂಬರು
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ
ಉಂಬ ಜಂಗಮ ಬಂದಡೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ
ನಮ್ಮ ಕೂಡಲ ಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ

**೩. ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ. ೪x೫=೨೦**

೧) ಸಂತ ಶಿಶುನಾಳ ಶರೀಫ ೨) ಅಕ್ಕಮಹಾದೇವಿ ೩) ಕನಕದಾಸ

೪) ವಡ್ಡಾರಾಧನೆ ೫) ಪಂಚತಂತ್ರ ೬) ಕೂಡಲೂರು ಬಸವಲಿಂಗಪ್ಪ

**೪. ಮೂರು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ. ೩x೧೦=೩೦**

ಅ) 'ಕಡಕೋಳ ಮಡಿವಾಳಪ್ಪನವರ ಮಾನಗೇಡಿ ಮಂದಿ ಹುಟ್ಟಿ' ತತ್ವಪದದಲ್ಲಿನ ವಿಚಾರಗಳನ್ನು ವಿವರಿಸಿ.

ಆ) ಜಾತಿ, ಲಿಂಗ ಸಮಾನತೆಯ ಪ್ರತಿಪಾದನೆ, ಡಾಂಭಿಕ ಭಕ್ತಿಯ ವಿಡಂಬನೆ ಕುರಿತಂತೆ ಜೇಡರ ದಾಸಿಮಯ್ಯನ ನಿಲುವುಗಳನ್ನು ವಿವರಿಸಿ.

(ಪು.ತಿ.ನೋ.)



ಇ) ಕೃಷ್ಣನ ಬಗೆಗೆ ವಾದಿರಾಜರು ಮಾಡಿರುವ ಕೊಂಡಾಟಗಳನ್ನು ವಿವರಿಸಿ.

ಈ) ಹೆಣ್ಣು, ಮೂರ್ಖ, ಸುತ, ಬಂಧುಗಳ ಬಗೆಗೆ ಸೋಮನಾಥನ ನಿಲುವುಗಳನ್ನು ವಿವರಿಸಿ.

**೨. ಮೂರು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ ೩x೧೦=೩೦**

ಅ) ಕವಿ ಮಾತುಗಳ ಬಗೆಗೆ ಚಿದಾನಂದ ಅವಧೂತರ ನಿಲುವುಗಳನ್ನು ವಿಮರ್ಶಿಸಿ.

ಆ) ಡಾಂಭಿಕ ಭಕ್ತರ ಬಗೆಗಿನ ಪುರಂದರ ದಾಸರ ವಿಚಾರಗಳನ್ನು ವಿವರಿಸಿ.

ಇ) 'ಒಳ್ಳೆಯದನ್ನು ಮಾಡಿದವರು ಒಳ್ಳೆಯ ಪ್ರತಿಫಲವನ್ನೇ ಪಡೆಯುತ್ತಾರೆ'– ಎಂಬ ಮಾತನ್ನು ಶಿವಭೂತಿಯ ಕಥೆಯ ಹಿನ್ನೆಲೆಯಲ್ಲಿ ವಿವರಿಸಿ.

ಈ) ಡಾಂಭಿಕ ಭಕ್ತಿಯ ಬಗೆಗೆ ಬಸವಣ್ಣನವರ ಮಾತುಗಳನ್ನು ಪರಿಶೀಲಿಸಿ.

ಉ) ಸುಭೌಮ ಚಕ್ರವರ್ತಿಯ ಚರಿತ್ರೆಯನ್ನು ವಿವರಿಸಿರಿ.

* * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಜಾಣ ಪರೀಕ್ಷೆ – ೨೦೨೨

ಪ್ರಶ್ನೆಪತ್ರಿಕೆ – ೨

## ನಾಟಕ ಮತ್ತು ಪ್ರಬಂಧ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ನಾಟಕ

**೧. ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿ. ೧x೧೫=೧೫**

ಅ. ರೈತ ಮತ್ತು ಜಲಗಾರನ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

ಆ. ಶಿವ ತನ್ನನ್ನು 'ಜಗದ ಜಲಗಾರ'ನೆಂದು ಕರೆದುದರ ಔಚಿತ್ಯವೇನು? ವಿವರಿಸಿ.

**೨. ಕೆಳಗಿನ ವಾಕ್ಯಗಳಲ್ಲಿ ಮೂರಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿರಿ. ೩x೫=೧೫**

ಅ. ಭೂಮಿಗಿಳಿದಿಹ ಕಾಮಧೇನುಗಳು; ರೈತರೇ

ಆ. ನಲ್ವಾತುಗಳೇ ಮಂತ್ರಘೋಷ; ನೀತಿಯೆ ಪರಮವೇದ

ಇ. ಗುಡಿಗಳಿವು ಪಾಪಿಗಳ ಭೋಗಿಗಳ ಗೂಡುಗಳು !

ಈ. ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ?

ಉ. ಅಂಜದಿರು, ಸೋದರನೆ! ಜಗದ ಜಲಗಾರ ನಾನು !

### ಗದ್ಯ ಸಾಹಿತ್ಯ

**೩. ಕೆಳಗಿನವುಗಳಲ್ಲಿ ಐದಕ್ಕೆ ಟಿಪ್ಪಣಿ ಬರೆಯಿರಿ. ೫x೫=೨೫**

ಅ) ಐನೋರ ಹೊಲ ಆ) ಕ್ಯಾನ್ಸರ್

ಇ) ಎಚ್. ನರಸಿಂಹಯ್ಯ ಈ) ಶಿಖಂಡಿ

ಉ) ಯುದ್ಧ ಮತ್ತು ಶಾಂತಿ ಊ) ಹಾ.ಮಾ. ನಾಯಕ

ಋ) ಬೌದ್ಧ ಕ್ಷೇತ್ರಗಳು

(ಮ.ತಿ.ನೋ.)

ಜಾ/೨

**೪. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ೩x೧೦=೩೦**

ಅ. ಸಿದ್ಧಲಿಂಗಯ್ಯನವರ ಹುಡುಗಾಟದ ದಿನಗಳು ಹೇಗಿದ್ದವು?

ಆ. ಹಿಜಡಾಗಳ ಬಗ್ಗೆ ದಕ್ಷಿಣ ಭಾರತ–ಉತ್ತರ ಭಾರತಗಳ ನಡುವೆ ಇರುವ ವ್ಯತ್ಯಾಸಗಳೇನು?

ಇ. ಗುಳೆ ಹೊರಟ ಅಲೆಮಾರಿ ದೊಂಬಿದಾಸ ಸಮುದಾಯದ ಬವಣೆಯೇನು?

ಈ. ಘಟಿಕೋತ್ಸವದಲ್ಲಿ ಕುವೆಂಪು ಅವರು ಯುವಕರಿಗೆ ನೀಡಿದ ಸಂದೇಹವೇನು?

ಉ. ಸಾಹಿತಿಯಾದವರ ಜವಾಬ್ದಾರಿಗಳ ಬಗ್ಗೆ ಜಿ. ರಾಮಕೃಷ್ಣ ಅವರು ಹೇಗೆ ಚರ್ಚಿಸಿದ್ದಾರೆ.

**೫. ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. ೧x೧೫=೧೫**

ಅ. ಸಮಾಜವನ್ನು ಪುನರುಜ್ಜೀವನಗೊಳಿಸುವಲ್ಲಿ ವಿಚಾರವಾದಿಗಳ ಪಾತ್ರವೇನು?

ಆ. ಪಿ. ಲಂಕೇಶರಿಗೆ ಬಿದ್ದ ಕನಸು ಯಾರ ಕುರಿತಾಗಿತ್ತು? ಅದರಿಂದಾದ ಪರಿಣಾಮಗಳೇನು?

***

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಜಾಣ ಪರೀಕ್ಷೆ – ೨೦೨೨

**ಪ್ರಶ್ನೆಪತ್ರಿಕೆ – ೩**

## ಕನ್ನಡ ಸಾಹಿತ್ಯ ಚರಿತ್ರೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

೧. ೧೦ನೇ ಶತಮಾನದ ಕಾವ್ಯಗಳ ವೈಶಿಷ್ಟ್ಯವನ್ನು ವಿಶ್ಲೇಷಿಸಿ. **೧x೧೫=೧೫**

**ಅಥವಾ**

ಚಾವುಂಡರಾಯ, ನಾಗವರ್ಮ, ದುರ್ಗಸಿಂಹ, ಬ್ರಹ್ಮಶಿವ ಇವರುಗಳಲ್ಲಿ ಮೂವರ ಕೃತಿಗಳನ್ನು ಪರಿಚಯ ಮಾಡಿಕೊಡಿ.

೨. ವಚನ ಸಾಹಿತ್ಯದಲ್ಲಿ ಬಸವಣ್ಣ ಮತ್ತು ಮಹಾದೇವಿ ಅಕ್ಕನ ಸ್ಥಾನವನ್ನು ಕುರಿತು ಬರೆಯಿರಿ. **೧x೧೫=೧೫**

**ಅಥವಾ**

ಹರಿಹರನ ರಗಳೆಗಳ ಮಹತ್ವವನ್ನು ವಿವರಿಸಿ.

೩. ಕುಮಾರವ್ಯಾಸ ಭಾರತದ ಪ್ರಸ್ತುತತೆಯನ್ನು ಚರ್ಚಿಸಿ. **೧x೧೫=೧೫**

**ಅಥವಾ**

ಕನ್ನಡ ಸಾಹಿತ್ಯಕ್ಕೆ ದಾಸ ಸಾಹಿತ್ಯದ ಕೊಡುಗೆ ಏನು? ವಿಶ್ಲೇಷಿಸಿ.

೪. ಚಿಕ್ಕದೇವರಾಜ ಒಡೆಯರ ಕಾಲದ ಕವಿಗಳನ್ನು ಪರಿಚಯಿಸಿ. **೧x೧೫=೧೫**

**ಅಥವಾ**

ರತ್ನಾಕರವರ್ಣಿ ಮತ್ತು ಸಂಚಿ ಹೊನ್ನಮ್ಮನ ಕಾವ್ಯಗಳ ಮಹತ್ವವನ್ನು ವಿವೇಚಿಸಿ.

೫. ಮುದ್ದಣನ ಕೃತಿಗಳ ವಿಶೇಷತೆಯನ್ನು ವಿವರಿಸಿ. **೧x೧೫=೧೫**

**ಅಥವಾ**

ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರ ಬೆಳೆದು ಬಂದ ಬಗೆಯನ್ನು ವಿವರಿಸಿ.

(ಪು.ತಿ.ನೋ.)



೬. ಇವುಗಳಲ್ಲಿ ಐದಕ್ಕೆ ಟಿಪ್ಪಣಿ ಬರೆಯಿರಿ. **೫x೫=೨೫**

| | |
|---|---|
| ೧. ನಯಸೇನ | ೨. ಜೇಡರ ದಾಸಿಮಯ್ಯ |
| ೩. ಸಿದ್ಧರಾಮ | ೪. ಭೀಮಕವಿ |
| ೫. ನೇಮಿಚಂದ್ರ | ೬. ಆಂಡಯ್ಯ |
| ೭. ಕೆಂಪು ನಾರಾಯಣ | ೮. ದ.ರಾ. ಬೇಂದ್ರೆ |

* * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಜಾಣ ಪರೀಕ್ಷೆ – ೨೦೨೨

**ಪ್ರಶ್ನೆಪತ್ರಿಕೆ – ೪**

## ಹೊಸಗನ್ನಡ ವ್ಯಾಕರಣ ಮತ್ತು ಛಂದಸ್ಸು

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ಭಾಗ – ೧

### ಹೊಸಗನ್ನಡ ವ್ಯಾಕರಣ

**I. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೨x೧೦=೨೦**

೧. ವರ್ಣ ಎಂದರೇನು? ಕನ್ನಡ ವರ್ಣಮಾಲೆಯ ಸ್ವರೂಪವನ್ನು ವಿವರಿಸಿ.

೨. ಸಂಧಿ ಎಂದರೇನು? ಕನ್ನಡ ಸಂಧಿಗಳನ್ನು ವಿಸ್ತರಿಸಿ ಬರೆಯಿರಿ.

೩. ಕನ್ನಡದಲ್ಲಿ ಎಷ್ಟು ಲಿಂಗಳಿವೆ? ಯಾವುವು ತಿಳಿಸಿ.

೪. ವಿಭಕ್ತಿ ಎಂದರೇನು? ವಿಭಕ್ತಿ ಪ್ರತ್ಯಯಗಳನ್ನು ಪರಿಚಯಿಸಿ.

೫. ಸಮಾಸ ಎಂದರೇನು? ಯಾವುದಾದರೂ ಎರಡು ಸಮಾಸಗಳನ್ನು ವಿಸ್ತರಿಸಿ ಬರೆಯಿರಿ.

**II. ಯಾವುದಾದರೂ ನಾಲ್ಕಕ್ಕೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ. ೪x೧=೪**

| | | |
|---|---|---|
| ಯಾತ್ರಾ | ಕ್ಷೀರ | ಜವ |
| ಅಕ್ಕರ | ಕಾವ್ಯ | ಸ್ವರ್ಗ |

**೧. ಮೂರನ್ನು ಬಿಡಿಸಿ ಬರೆದು ಸಂಧಿ/ಸಮಾಸದ ಹೆಸರನ್ನು ತಿಳಿಸಿ. ೩x೨=೬**

| | | |
|---|---|---|
| ನೋಯಿಸು | ಲೋಕೈಕ | ಬೆಟ್ಟದಾವರೆ |
| ಕವೀಂದ್ರ | ಕಿರುಗೂಸು | ಮುಕ್ಕಣ್ಣ |

**೨. ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ. ೪x೫=೨೦**

| | | |
|---|---|---|
| ಸ್ವರಗಳು | ಪ್ರಕೃತಿಭಾವ | ನಾಮಪದ |
| ಸರ್ವನಾಮ | ಗಮಕಸಮಾಸ | ಅವ್ಯಯಗಳು |

(ಪು.ತಿ.ನೋ.)



### ಭಾಗ – ೨

### ಛಂದಸ್ಸು

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ೨x೧೦=೨೦**

೧. ಛಂದಸ್ಸಿನ ಉಗಮ ನಿಷ್ಪತ್ತಿ ಮತ್ತು ಸ್ವರೂಪವನ್ನು ಚರ್ಚಿಸಿ.

೨. ಲಯ, ಯತಿ, ಪ್ರಾಸದ ಬಗ್ಗೆ ಪರಿಚಯಿಸಿ.

೩. ಮಾತ್ರಾಗಣ ಮತ್ತು ಅಂಶಗಣದ ಸ್ವರೂಪವನ್ನು ತಿಳಿಸಿ.

೪. ಖ್ಯಾತ ಕರ್ನಾಟಕಗಳು ಎಂದರೇನು? ಯಾವುದಾದರೂ ಎರಡು ವೃತ್ತಗಳನ್ನು ಪರಿಚಯಿಸಿ.

**IV. ಅ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ. ೪x೫=೨೦**

| | |
|---|---|
| ೧. ಪ್ರಾಸದ ಸ್ವರೂಪ | ೨. ಛಂದೋಂಬುಧಿ |
| ೩. ವರ್ಣಗಣ | ೪. ಗಣಪರಿವೃತ್ತಿ |
| ೫. ಸಾಂಗತ್ಯ | ೬. ಸುನೀತ |

**ಆ. ಒಂದು ಪದ್ಯಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ. ೧x೧೦=೧೦**

೧. ತೆಂಕಣಗಾಳಿ ಸೋಂಕಿದೊಡ ಮೊಳ್ನಡಿಗೇಳ್ದೊಡಮಿಂಪನಾಳ್ದಗೇ
ಯಂಕಿವಿವೊಕ್ಕಡಂ ಬಿರಿದ ಮಲ್ಲಿಗೆ ಗಂಡೊಡಮಾದ ಕೆಂದಲಂ
ಪಂಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟೊಡಂ ನೆನವುದೆನ್ನ ಮನಂ ವನವಾಸಿ ದೇಶಮಂ

೨. ಅರಸುಗಳಿಗಿದು ವೀರ ದ್ವಿಜರಿಗೆ
ಪರಮ ವೇದದ ಸಾರ ಯೋಗೀ
ಶ್ವರರ ತತ್ವ ವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕ್ಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ

***